

ವಾರ್ಡ್‌ಗಳಲ್ಲಿ ಹಸಿ ತ್ಯಾಜ್ಯದಿಂದ ಗೊಬ್ಬರ ಮಾಡಲು ವ್ಯಕ್ತಿ, ಸಂಘ-ಸಂಸ್ಥೆಗಳಿಗೆ ಅವಕಾಶ

'ಕಾಂಪೋಸ್ಟ್ ಸರ್ವೀಸ್'ಗೆ ರಿಯಾಯಿತಿ

• ಆರ್. ಮಂಜುನಾಥ್

ಬೆಂಗಳೂರು: ಅಧಿಕ ಪ್ರಮಾಣದಲ್ಲಿ ಹಸಿ ತ್ಯಾಜ್ಯ ಸಂಗ್ರಹವಾಗುವ ಪ್ರದೇಶದಲ್ಲೇ ಅದನ್ನು ಗೊಬ್ಬರವಾಗಿಸಲು ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳಿಗೆ ಬಿಬಿಎಂಪಿ ಅವಕಾಶ ಕಲ್ಪಿಸುತ್ತಿದೆ. ಇದಕ್ಕಾಗಿ ಹಲವು ರಿಯಾಯಿತಿಗಳನ್ನು ನೀಡಲು ಯೋಜಿಸುತ್ತಿದೆ.

100 ಕೆ.ಜಿಗೂ ಅಧಿಕ ಹಸಿ ತ್ಯಾಜ್ಯ ಸಂಗ್ರಹವಾಗುವ ಕಟ್ಟಡ, ಮಾಲ್, ಅಪಾರ್ಟ್‌ಮೆಂಟ್‌ಗಳೇ ಅದನ್ನು ಸಂಸ್ಕರಿಸಬೇಕು ಎಂದು ಹಳೆಯ ನಿಯಮವನ್ನೇ ಬಿಬಿಎಂಪಿ ಇದೀಗ ಕಠಿಣವಾಗಿ ಜಾರಿಗೊಳಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ ಯಾರಾದರೂ ಗೊಬ್ಬರ ತಯಾರಿಸುವ ಘಟಕ ಸ್ಥಾಪಿಸಿಕೊಂಡರೆ ಅವರಿಗೆ ಲೈಸೆನ್ಸ್, ತೆರಿಗೆ ಸೇರಿ ಇತರ ವಿನಾಯಿತಿಗಳನ್ನು ನೀಡುವುದರ ಜೊತೆಗೆ ಗೊಬ್ಬರ ಮಾರಾಟಕ್ಕೂ ನೆರವಾಗಲಿದೆ. ಅಲ್ಲದೆ, ಮುಂದೆ ತ್ಯಾಜ್ಯ ವಿಲೇವಾರಿಗೆ ತೆರಿಗೆ ಅನುಷ್ಠಾನವಾದರೆ ಅದರಿಂದಲೂ ವಿನಾಯಿತಿ ಸಿಗಲಿದೆ.

ಹೆಚ್ಚು ಹಸಿ ಕಸ ಉತ್ಪತ್ತಿಯಾಗುವ ಸ್ಥಳ ಅಥವಾ ಕಟ್ಟಡಗಳನ್ನು ಬಿಬಿಎಂಪಿ ಗುರುತಿಸಿ, ಪಟ್ಟಿ ಮಾಡಿಕೊಂಡಿದೆ. ಆ ಕಟ್ಟಡದವರೇ ಸಂಸ್ಕರಣೆ ಮಾಡಬಹುದು ಅಥವಾ ಮೂರ್ನಾಲ್ಕು ನಿವಾಸಿಗಳ ಸಂಘಗಳು ಸೇರಿಕೊಂಡು ಗೊಬ್ಬರವಾಗಿಸಿಕೊಳ್ಳಬಹುದು. ಇದಲ್ಲದೆ, ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ಅವರಿಂದ ತ್ಯಾಜ್ಯವನ್ನು ಪಡೆದು, ಅವರ ಸ್ಥಳ ಅಥವಾ ಬೇರೆಲ್ಲಾದರೂ ಸಂಸ್ಕರಿಸಬಹುದು. ಇದನ್ನು 'ಕಾಂಪೋಸ್ಟ್ ಸರ್ವೀಸ್' ಎಂದು ಹೆಸರಿಸಲು ಬಿಬಿಎಂಪಿ ಅಧಿಕಾರಿಗಳು ಯೋಜಿಸಿದ್ದಾರೆ.

'ಸಂಸ್ಕರಣೆಗೆ ಯಾವುದೇ ಮಾದರಿ ಅಳವಡಿಸಿಕೊಳ್ಳಬಹುದು. ಆದರೆ ವೈಜ್ಞಾನಿಕವಾಗಿರಬೇಕು. ಇದನ್ನು ಬಿಬಿಎಂಪಿ ನಿಗಾವಹಿಸಲಿದೆ. ಹೆಚ್ಚಿನ ಸ್ಥಳ ಬೇಕಿಲ್ಲ, ವೆಚ್ಚವೂ ಕಡಿಮೆ. ಗೊಬ್ಬರ ಮಾರಾಟದಿಂದ ಲಾಭವೂ ಬರುತ್ತದೆ. ಇದರಿಂದ ಸ್ವಯಂ ಉದ್ಯೋಗದ ಅವಕಾಶಗಳೂ ತೆರೆದುಕೊಳ್ಳಲಿವೆ. ಸಣ್ಣ ಪ್ರಮಾಣದಲ್ಲಿ ಸಂಸ್ಕರಣೆ, ಆಧುನಿಕ ತಂತ್ರಜ್ಞಾನದಿಂದ ವಾಸನೆ, ಕೊಳಕು ನೀರನ್ನೂ ನಿಯಂತ್ರಿಸಬಹುದು' ಎಂದು ಹಿರಿಯ ಅಧಿಕಾರಿ ಹೇಳಿದರು.

ಒಂದು ವಾರ್ಡ್‌ನಲ್ಲಿ ನಿತ್ಯವೂ ಸುಮಾರು 20 ಟನ್ ಹಸಿ ತ್ಯಾಜ್ಯ ಸಂಗ್ರಹವಾಗುತ್ತದೆ. ಇದು ಅದೇ ವಾರ್ಡ್‌ನಲ್ಲಿ ಅಲ್ಲಲ್ಲಿ ಸಂಸ್ಕರಣೆಯಾದರೆ ಕಸದ ಸಮಸ್ಯೆ ಬಹುತೇಕ ನಿವಾರಣೆಯಾಗುತ್ತದೆ. ಹೀಗಾಗಿ ಈ 'ಕಾಂಪೋಸ್ಟ್ ಸರ್ವೀಸ್' ಯೋಜನೆಯ ಕೀಪ್ಪು ಜಾರಿಗೆ ಬಿಬಿಎಂಪಿ ಪ್ರಕ್ರಿಯೆಗಳನ್ನು ಆರಂಭಿಸಿದೆ.



ಸಾಂದರ್ಭಿಕ ಚಿತ್ರ

ಹಲವು ಮಾದರಿ

ಗೊಬ್ಬರ ತಯಾರಿಕೆ ಸಂಘ-ಸಂಸ್ಥೆಗಳಲ್ಲಿ, ಮಾರುಕಟ್ಟೆಯಲ್ಲಿ ಸಾಕಷ್ಟು ಮಾದರಿಗಳಿವೆ. ಹಸಿ ಕಸದ ಸಾಮರ್ಥ್ಯಕ್ಕೆ ಅನುಗುಣವಾಗಿ ಇವುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ತ್ಯಾಜ್ಯ ಸಂಸ್ಕರಣೆ ಘಟಕ ಅದು ಎಂದು ಗೊತ್ತಾಗದ ರೀತಿಯಲ್ಲಿ ಮಾದರಿಗಳಿವೆ. ಅದಕ್ಕೆ ಮೊದಲು ಎಲ್ಲಿ ಅಳವಡಿಕೆಯಾಗಿದೆ ಎನ್ನುವುದನ್ನು ನೋಡಿ, ಪರಿಶೀಲಿಸಿಕೊಳ್ಳುವುದು ಉತ್ತಮ. ಹಸಿ ಕಸದಿಂದ ಗೊಬ್ಬರ ತಯಾರಿಕೆ ನಮ್ಮ ಜವಾಬ್ದಾರಿಯಾಗಬೇಕು.

ಡಾ. ಶಾಂತಿ ಶುಮ್ಮಲ
ಸದಸ್ಯೆ ಘನತ್ಯಾಜ್ಯ ನಿರ್ವಹಣೆ ರೌಂಡ್ ಟೇಬಲ್ (ಎಸ್‌ಡಬ್ಲ್ಯುಎಂಆರ್‌ಟಿ)

ಪ್ರಜಾವಾಣಿ ವಿಶೇಷ

ಎಲ್ಲರಿಗೂ ಅನುಕೂಲ

ನ್ಯಾಯಾಲಯ ಹಲವು ಸಂದರ್ಭಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಆ ಪ್ರದೇಶಗಳಲ್ಲೇ ಸಂಸ್ಕರಣೆ ಮಾಡಬೇಕು ಎಂದು ಸೂಚಿಸಿದೆ. ಅಲ್ಲದೆ, ತಜ್ಞರು ಕೂಡ ಅದೇ ರೀತಿಯ ಅಭಿಪ್ರಾಯ ನೀಡಿದ್ದಾರೆ. ಹೀಗಾಗಿ ಹಸಿ ತ್ಯಾಜ್ಯವನ್ನು ವಾರ್ಡ್ ಮಟ್ಟದಲ್ಲೇ ಸಂಸ್ಕರಿಸಿ, ಗೊಬ್ಬರವನ್ನಾಗಿಸುವ ಪ್ರಕ್ರಿಯೆಗೆ ಹೆಚ್ಚು ಉತ್ತೇಜನ ನೀಡಲಾಗುತ್ತಿದೆ. ಎಲ್ಲ ರೀತಿಯ ಕಸವನ್ನು ಅಯಾ ವಾರ್ಡ್‌ನಲ್ಲೇ ಸಂಸ್ಕರಣೆ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಬಿಬಿಎಂಪಿಯೊಂದಿಗೆ ಕೈಜೋಡಿಸಿದರೆ ನಾಗರಿಕರು ಅಥವಾ ಸಂಘ-ಸಂಸ್ಥೆಗಳಿಗೂ ಅನುಕೂಲವಾಗುತ್ತದೆ ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್ ತಿಳಿಸಿದರು.

'ಗೊಬ್ಬರ ಘಟಕ'ಕ್ಕೆ ಟೆಂಡರ್

ವಾರ್ಡ್‌ನಲ್ಲಿ ಸಂಗ್ರಹವಾಗುವ ಎಲೆ, ಗಿಡ, ಬಳ್ಳಿಯಂತಹ ತ್ಯಾಜ್ಯವನ್ನು ಸಾವಯವ ಗೊಬ್ಬರವಾಗಿಸುವ ನಿಟ್ಟಿನಲ್ಲಿ 200 ಸ್ಥಳಗಳಲ್ಲಿ 'ಗೊಬ್ಬರ ಘಟಕ'ಗಳನ್ನು ಸ್ಥಾಪಿಸಲಾಗುತ್ತಿದೆ. ಒಂದು ಟನ್ ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ಸುಮಾರು ₹6 ಲಕ್ಷ ವೆಚ್ಚವಾಗಲಿದೆ. ಈ ಘಟಕಗಳ ಸ್ಥಾಪನೆಗೆ ಸದ್ಯದಲ್ಲಿಯೇ ಟೆಂಡರ್ ಕರೆಯಲಾಗುತ್ತಿದೆ. ಈ ಘಟಕಗಳ ಮೇಲ್ವಿಚಾರಣೆಯನ್ನು ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೇ ವಹಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

Prajavani Pg.05

ಸಹಾಯಧನ ಕಡಿತ, ಮೀಟರ್ ಅಳವಡಿಕೆಗೆ ಕಸರತ್ತು | ಹೆಚ್ಚುವರಿ ಬಳಕೆಗೆ ಶುಲ್ಕ ಪಾವತಿ ಕಡ್ಡಾಯ

ಕೃಷಿ ಪಂಪ್‌ಸೆಟ್‌ಗಿಲ್ಲ ಉಚಿತ ವಿದ್ಯುತ್!

■ ನಿಜಗುಣಿ ದಿಂಡಲಕೊಪ್ಪ ಧಾರವಾಡ
nijaguni.dindalkoppa@timesgroup.com

ಕೃಷಿ ಪಂಪ್‌ಸೆಟ್‌ಗೆ ಪೂರೈಸಲು ಮಾಸಿಕ ಇಂತಿಷ್ಟು ವಿದ್ಯುತ್ (ಯುನಿಟ್) ಎಂದು ನಿಗದಿಗೊಳಿಸಿರುವ ಸರಕಾರ ಈವರೆಗೂ ರೈತರಿಗೆ ನೀಡುತ್ತಿದ್ದ ಉಚಿತ ವಿದ್ಯುತ್ ಪೂರೈಕೆ ಸೌಲಭ್ಯಕ್ಕೆ ಕತ್ತರಿ ಹಾಕಿದೆ!

ದಿನಕ್ಕೆ ನಿರಂತರವಾಗಿ 7 ಗಂಟೆ ವಿದ್ಯುತ್ ಪೂರೈಸುವುದಾಗಿ ಹೇಳಿದ್ದ ಸರಕಾರ ಈಗ ದಿಢೀರ್ ಉಚಿತ ವಿದ್ಯುತ್ ಬಳಕೆಗೆ ಮಿತಿ ಹೇರಿದೆ. ಪರಿಣಾಮ, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊರತೆ ಆತಂಕ ಎದುರಾಗಿದೆ. ಪ್ರತಿ ತಿಂಗಳು ನಿಗದಿಗೊಳ್ಳುವ ಈ ವಿದ್ಯುತ್ ಪ್ರಮಾಣವನ್ನೂ ಪಂಪ್‌ಸೆಟ್‌ವಾರು ಹಂಚಿಕೆ ಮಾಡಲು ಅಡಚಣೆಯಾಗಿ ಫೀಡರ್‌ವಾರು ಹಂಚಿಕೆ ಮಾಡಿರುವುದರಿಂದ ರೈತರಿಗೆ ಮತ್ತೊಂದು ಬರೆ ಬಿದ್ದಂತಾಗಿದೆ.

ರಾಜ್ಯದಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ 21,333 ಮಿಲಿಯನ್ ಯುನಿಟ್ ವಿದ್ಯುತ್ ಬೇಕು. ಇದಕ್ಕೆ ಸರಕಾರವು ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳಿಗೆ 16 ಸಾವಿರ ಕೋಟಿ ರೂ. ಸಹಾಯಧನ ನೀಡಬೇಕು. ಆದರೆ, ಪ್ರಸಕ್ತ ವರ್ಷ 12 ಸಾವಿರ ಕೋಟಿ ರೂ. ಮಾತ್ರ ನೀಡಿದೆ. ಇದರಿಂದ ಎಸ್ಕಾಂಗಳು ಸಹಾಯಧನಕ್ಕೆ ತಕ್ಕಂತೆ 16,000 ಮಿಲಿಯನ್ ಯುನಿಟ್ ವಿದ್ಯುತ್ ಮಾತ್ರ ಹಂಚಿಕೆ ಮಾಡಿವೆ. ಅಂದರೆ 5 ಎಚ್‌ಪಿ ಮೋಟರ್ ಪಂಪ್‌ಸೆಟ್‌ಗೆ ಮಾಸಿಕ 777 ಯುನಿಟ್ ನಿಗದಿಯಾಗಿದೆ. ಇದರಿಂದ ಬೇಡಿಕೆಗೆ ತಕ್ಕಂತೆ ವಿದ್ಯುತ್ ಸಿಗುತ್ತಿಲ್ಲ. ಹೆಚ್ಚುವರಿ ವಿದ್ಯುತ್ ಬೇಕಾದಲ್ಲಿ ಮೀಟರ್ ಅಳವಡಿಕೆಯ ಅನಿವಾರ್ಯತೆ ಎದುರಾಗಿದೆ.

7 ಗಂಟೆ ತ್ರೀ- ಫೆಸ್ ಡೌಟ್

ಸರಕಾರದ ಸಹಾಯಧನದಲ್ಲಿ ಹಂಚಿಕೆಯಾದ ವಿದ್ಯುತ್‌ನಲ್ಲಿ ಎಸ್ಕಾಂಗಳು ನಿರಂತರ ಇರಲಿ, ಈಗ ನೀಡುತ್ತಿದ್ದ 7 ಗಂಟೆ ತ್ರೀ- ಫೇಸ್ ಕೂಡ ನೀಡಲು ಸಾಧ್ಯವಿಲ್ಲ. ಹೀಗಾಗಿ, ಈ ವಿಚಾರದಲ್ಲಿ ಅಧಿಕಾರಿಗಳು ಅಸಹಾಯಕ ವಾಗಿದ್ದಾರೆ. ಅನುದಾನಕ್ಕೆ ತಕ್ಕಂತೆ ವಿದ್ಯುತ್ ನೀಡುತ್ತಿದ್ದೇವೆ. ಹೆಚ್ಚಿನ ವಿದ್ಯುತ್ ಪೂರೈಸಲು ನಮಗೆ ಅಧಿಕಾರ ಇಲ್ಲ ಎಂದು ಕೈ ಚೆಲ್ಲಿದ್ದಾರೆ.

ಒಂದು ಫೀಡರ್ ವ್ಯಾಪ್ತಿಯಲ್ಲಿ ಎಷ್ಟು ಪಂಪ್‌ಸೆಟ್‌ಗಳಿವೆ? ಎಷ್ಟೆಷ್ಟು ಅಶ್ವಶಕ್ತಿಯ ಪಂಪ್‌ಸೆಟ್‌ಗಳಿವೆ? ಕಳೆದ ಐದು ವರ್ಷಗಳಲ್ಲಿ ಈ ಫೀಡರ್‌ನಿಂದ ಬಳಕೆಯಾದ ವಿದ್ಯುತ್ ಪ್ರಮಾಣ ಲೆಕ್ಕ ಹಾಕಿ ಫೀಡರ್‌ವಾರು ವಿದ್ಯುತ್ ಹಂಚಲಾಗುತ್ತಿದೆ. ಹೀಗಾಗಿ, 20 ಪಂಪ್‌ಸೆಟ್ ಇರುವ ಒಂದು ಫೀಡರ್ ವ್ಯಾಪ್ತಿಯ ಪೈಕಿ 10 ರೈತರು ತಿಂಗಳ ಆರಂಭದಲ್ಲೇ ನಿಗದಿತ ವಿದ್ಯುತ್ ಬಳಸಿದರೆ ಉಳಿದ 10 ರೈತರಿಗೆ ಆ ತಿಂಗಳು ವಿದ್ಯುತ್ ಸಿಗುವುದಿಲ್ಲ. ಇದರಿಂದ, ಭಾಗಶಃ ರೈತರಿಗೆ ವಿದ್ಯುತ್ ಸೌಲಭ್ಯವೇ ಕೈತಪ್ಪಿ ಹೋಗುವ ಆತಂಕ ಎದುರಾಗಿದೆ.



ಸರಕಾರದ ಅನುದಾನಕ್ಕೆ ತಕ್ಕಂತೆ ಹೆಸ್ಕಾಂ ವಿದ್ಯುತ್ ಪೂರೈಕೆ ಮಾಡುತ್ತಿದೆ. ಹೆಚ್ಚಿನ ವಿದ್ಯುತ್ ಪೂರೈಕೆಗೆ ನಮಗೆ ಅವಕಾಶ ಇಲ್ಲ. ಹೆಚ್ಚುವರಿ ವಿದ್ಯುತ್‌ಗೆ ರೈತರು ಶುಲ್ಕ ಭರಿಸಬೇಕು. ಇದಕ್ಕೆ ಮೀಟರ್ ಅಳವಡಿಸಿಕೊಳ್ಳಬೇಕು.
- ಶರಣಮ್ಮ ಜಂಗಿನ ಹೆಸ್ಕಾಂ ಅಧೀಕ್ಷಕ ಎಂಜಿನಿಯರ್

ಎಷ್ಟು ಎಚ್‌ಪಿಗೆ ಎಷ್ಟು ವಿದ್ಯುತ್ ಹಂಚಿಕೆ?

- 5 ಎಚ್‌ಪಿ ಮೋಟರ್ ಪಂಪ್‌ಸೆಟ್- ಮಾಸಿಕ 777 ಯುನಿಟ್
- 7.5 ಎಚ್‌ಪಿ ಮೋಟರ್- ಮಾಸಿಕ 1,165 ಯುನಿಟ್
- 10 ಎಚ್‌ಪಿವರೆಗಿನ ಮೋಟರ್- ಮಾಸಿಕ 1,554 ಯುನಿಟ್
- 10 ಎಚ್‌ಪಿಗಿಂತ ಹೆಚ್ಚಿನ ಮೋಟರ್- ಉಚಿತ ವಿದ್ಯುತ್ ಇಲ್ಲ

ಮೀಟರ್ ಅಳವಡಿಕೆ ಅನಿವಾರ್ಯ

ಫೀಡರ್‌ವಾರು ವಿದ್ಯುತ್ ಪೂರೈಕೆಯಿಂದಾಗಿ ಯಾವ ರೈತ ಎಷ್ಟು ವಿದ್ಯುತ್ ಬಳಸಿದ್ದಾನೆ ಎಂಬುದು ಲೆಕ್ಕ ಹಾಕುವುದು ಕಷ್ಟವಾಗ್ತ. ರೈತರಲ್ಲಿಯೇ ಜಗಳ ಹುಟ್ಟುವ ಸಾಧ್ಯತೆಗಳಿವೆ. ಇದಕ್ಕೆ ಪರಿಹಾರವಾಗಿ ಮೀಟರ್ ಅಳವಡಿಕೆ ಕಡ್ಡಾಯಗೊಳಿಸುವ ಅನಿವಾರ್ಯತೆ ಎದುರಾಗಿದೆ. ರೈತರು ಹೆಚ್ಚುವರಿ ವಿದ್ಯುತ್‌ಗೆ ಪ್ರತಿ ಯುನಿಟ್‌ಗೆ 6.50 - 7.00 ರೂ. ಶುಲ್ಕ ಪಾವತಿಸಬೇಕಾಗುತ್ತದೆ.

Vijayakarnataka Pg.05

Sanjeevani — from legend to cultivation at Himalayas

RAJESH KUMAR THAKUR
@ New Delhi

AS legend goes, Hanuman couldn't readily identify the Sanjeevani Booti, the life-saving medicinal herb, on Dronagiri, the Himalayan mountain. So, he plucked the mountain and flew back to Lanka. He wouldn't have to do that today.

The life-saving medicinal herb, Selaginella Bryopteris, is not only easily identifiable, but its location can now be pinpointed to the nearest metre.

The government intends to launch commercial cultivation of the herb in the Himalayas. In Ladakh, to be precise. The programme is being handled by the local administration in Ladakh.

The herb, whose life-reviving properties are well advertised in India through the Ramayana, is said to restore life even of the comatose. The true potency will of course be revealed once the administration comes out with its research.

The Leh-based lab of the Defence Research and Development Organisation (DRDO), the world's highest agro-animal research laboratory, has been researching on this wonder plant for more than a decade. The Lieutenant Governor of Ladakh recently shared the information with Union Minister of State for Science and Technology Dr Jitendra Singh on a visit to Delhi.

It's not just Sanjeevani Booti. Two other medicinal plants will also be commercially produced. In the days when Ram was desperate to treat brother Laxman with the Sanjeevani Booti after he was felled unconscious by Ravan's son, the medicinal herb was apparently located in the Dronagiri Mountain. The mountain is said to be close to the Chinese border.

The herb has a peculiar feature. It is seen at heights of over 15,000 feet. And it grows only at night, at least that is what's mythologically known. The fact will come out when the production is launched.

A statement released by the ministry gives some additional details: "The Sanjeevani booty is in local parlance in Ladakh region known as 'Sola'. It has a very high life saving and therapeutic properties."

Besides this initiative, Ladakh is all set to have India's first 'Night Sky Sanctuary' in the premises of the Changthang Wildlife Sanctuary. It will have all facilities to enable people to gaze at the night sky and enjoy watching the stars.

It will be situated in Hinle village, which is famous for the 17th century Hanle monastery. Hanle is best suited because it is located in Ladakh's cold desert region, away from the hustle and bustle of human activity. The site will be the highest-located in the world for optical and gamma-ray telescopic viewing of the sky at nights.

The Department of Science and Technology is spearheading this programme to boost astro-tourism. "This will be set up in next three months in first of its kind unique initiative started by department," a ministry statement said. A tripartite agreement was recently signed between the UT administration, Ladakh Autonomous Hill Development Council and the Indian Institute of Astrophysics.



'Mythological medicine'

Sanjeevani plant in Hindu mythology is described as a cure-all plant which can reverse even death.

This has got mention in the Ramayana

Lord Hanuman had brought this herb from Dronagiri mountain

A search of this herb is still said to be carried out across the Himalayan range of mountains

A search of this herb is still said to be carried out across the Himalayan range of mountains

It is seen at heights of over 15,000 ft, grows only at night

Govt intends to launch commercial cultivation of the herb in Himalayas

Indian Express Pg.09

ಸಾಂಪ್ರದಾಯಿಕ ಬೆಳೆ ಪದ್ಧತಿ ವಿರುದ್ಧ ಆಯೋಗ ವರದಿ

ಪರ್ಯಾಯ ಬೆಳೆ ಕುರಿತು ಅಧ್ಯಯನಕ್ಕೆ ಶೀಘ್ರ ಶಿಫಾರಸು | ಕೃಷಿ ಬೆಲೆ ಆಯೋಗದಿಂದ 4 ವರದಿ ತಯಾರಿ, ಸದ್ಯದಲ್ಲೇ ಸಲ್ಲಿಕೆ

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಪ್ರದೇಶವಾರು ಸಾಂಪ್ರದಾಯಿಕ ಬೆಳೆಗಳಿಗೆ ಜೋತು ಬೀಳದೆ ರೈತರಿಗೆ ಲಾಭದಾಯಕವಾಗುವಂತಹ ಪರ್ಯಾಯ ಬೆಳೆ ಕುರಿತು ಅಧ್ಯಯನ ನಡೆಯಬೇಕು ಎಂಬುದು ಸೇರಿ ನಾಲ್ಕು ಪ್ರಮುಖ ವರದಿಗಳನ್ನು ಕೃಷಿ ಬೆಲೆ ಆಯೋಗ ಸಿದ್ಧಪಡಿಸುತ್ತಿದ್ದು, ಶೀಘ್ರವೇ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಿದೆ.

ಅಡಿಕೆ, ಕಬ್ಬು, ಭತ್ತ, ಮೆಕ್ಕೆಜೋಳ ಮತ್ತಿತರ ಏಕ ಬೆಳೆಗಳು ಪ್ರದೇಶವಾರು ಪ್ರಾಮುಖ್ಯತೆ ಪಡೆಯುತ್ತಿದ್ದು, ಬದಲಿಸಬೇಕು. ಏಕೆಂದರೆ ಮಲೆನಾಡಿನಲ್ಲಿ ಅಡಿಕೆ, ಮಂಡ್ಯ ಮತ್ತು ಮುಂಬೈ ಕರ್ನಾಟಕದಲ್ಲಿ ಕಬ್ಬು, ರಾಯಚೂರು ಹಾಗೂ ಬಳ್ಳಾರಿ ಭಾಗದಲ್ಲಿ ಭತ್ತ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಮಧ್ಯ ಕರ್ನಾಟಕದಲ್ಲಿ ಮೆಕ್ಕೆಜೋಳವನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಆದ್ದರಿಂದ ಈ ಭಾಗಗಳಲ್ಲಿ ರೈತರಿಗೆ ಲಾಭದಾಯಕವಾಗುವಂತಹ ಪರ್ಯಾಯ ಬೆಳೆ ಬೆಳೆಯಲು ಅಧ್ಯಯನ ನಡೆಯಬೇಕು ಎಂಬ ಅಂಶಗಳು ಆಯೋಗದ ವರದಿಯಲ್ಲಿವೆ.

ಇದಲ್ಲದೆ, ಬೆಳೆ ಯೋಜನೆಗಾಗಿ ಬೆಲೆ ಮುನ್ಸೂಚನಾ ಬಾಬು, ಬೆಲೆ ಸೂಚ್ಯಂಕಗಳ ಕಾರ್ಯಸಾಧ್ಯತೆ ಅಧ್ಯಯನ, ಎಪಿಎಂಸಿಗಳ ಒಳಗೆ ಮತ್ತು ಹೊರಗೆ ಸದ್ಯಧೀಕರಣ ಮಾಡುವುದಕ್ಕೆ ಸಂಬಂಧಿಸಿದ ವರದಿಗಳನ್ನೂ ಆಯೋಗ ಸದ್ಯದಲ್ಲೇ ಸರ್ಕಾರಕ್ಕೆ ಸಲ್ಲಿಸಲಿದೆ.

ಕೆಲ ಶಿಫಾರಸು ಮಾತ್ರ ಅನುಷ್ಠಾನ: ಕೃಷಿ ಬೆಲೆ ಆಯೋಗಕ್ಕೆ ಹನುಮನಗೌಡ ಬೆಳಗುರ್ಕಿ ಅವರನ್ನು 2019ರಲ್ಲಿ ಅಧ್ಯಕ್ಷರನ್ನಾಗಿ ನೇಮಿಸಿದ್ದು, ಈಗಾಗಲೇ 10 ವರದಿ ರಾಜ್ಯ ಸರ್ಕಾರಕ್ಕೆ ಸಲ್ಲಿಕೆಯಾಗಿವೆ. ಇದರಲ್ಲಿ ಒಂದಷ್ಟು ಶಿಫಾರಸು ಅನುಷ್ಠಾನವಾಗಿದ್ದು, ಇನ್ನೂ ಬಹಳಷ್ಟು ಅಂಶಗಳನ್ನು ಜಾರಿಗೊಳಿಸಬೇಕಿದೆ. ನಮ್ಮ ಆಹಾರ ಸಂಸ್ಕೃತಿಗೆ ಅನುಗುಣವಾಗಿ ಪಡಿತರ ವ್ಯವಸ್ಥೆಯಡಿ ಅಕ್ಕಿಯ ಜೊತೆಗೆ ರಾಗಿ, ಜೋಳ ನೀಡಲು 'ಮುಖ್ಯಮಂತ್ರಿ ಅನ್ನಪೂರ್ಣ ಯೋಜನೆ' ಜಾರಿಗೆ ತರಬೇಕೆಂದು ಶಿಫಾರಸು ಮಾಡಿದ್ದು, ಅನುಷ್ಠಾನಗೊಳಿಸಲಾಗಿದೆ.

ಬಿಳಿ ಜೋಳ ಸಾಮಾನ್ಯವಾಗಿ ಹಿಂಗಾರು ಬೆಳೆಯಾಗಿದ್ದು, ಹಿಂಗಾರಿನಲ್ಲೇ ಬೆಂಬಲ ಬೆಲೆ ಘೋಷಿಸಬೇಕು ಎಂದು ವರದಿ ನೀಡಲಾಗಿತ್ತು. ಇದರನ್ವಯ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಬೆಳೆಕಟಾವು ಆಗುತ್ತಿದ್ದಂತೆ ಏರಿಳಿ ಕೇಂದ್ರ ಆರಂಭ ಆರಂಭಿಸಬೇಕು ಎಂದು ಮಾಡಿದ್ದ ಶಿಫಾರಸಿನಲ್ಲಿ ಒಂದಷ್ಟು ಪ್ರಗತಿಯಾಗಿದೆ. ಕೃಷಿ ಹಾಗೂ ತೋಟಗಾರಿಕೆಯ 27 ಬೆಳೆಗಳ ಸಾಗುವಳಿ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿಯನ್ನೂ ಆಯೋಗ ಸಲ್ಲಿಸಿದ್ದು ಈ ನಿಟ್ಟಿನಲ್ಲಿ ಶಿಫಾರಸು ಜಾರಿಯಾಗಬೇಕಿದೆ.



ತಿಂಗಳಾದರೂ ಅಧ್ಯಕ್ಷರ ನೇಮಕವಿಲ್ಲ

ಹಲವು ನಿಗಮ-ಮಂಡಳಿಗಳ ಅಧ್ಯಕ್ಷರ ನೇಮಕಾತಿಯನ್ನು ಈ ಹಿಂದೆ ಸರ್ಕಾರ ರದ್ದುಗೊಳಿಸಿದಾಗ, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಅವರ ನೇಮಕವನ್ನೂ ರದ್ದುಗೊಳಿಸಲಾಗಿದೆ. ತಿಂಗಳಾದರೂ ಹೊಸ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಇದರಿಂದಾಗಿ ಆಯೋಗದ ಮಹತ್ವಪೂರ್ಣ ಕಾರ್ಯಗಳಿಗೆ ಹಿನ್ನಡೆ ಉಂಟಾಗುತ್ತಿದೆ ಎಂಬ ದೂರು ರೈತರಿಂದ ಕೇಳಿ ಬಂದಿದೆ.

ಕನ್ನಡಪ್ರಭ Sun, 04 September 2022
https://kpepaper.asianetnews.com/c/69981117

Kannadaprabha Pg.08